# ಯಾವುದೇ ಸ್ಥಳ ಉಳಿಸದೇ ಕಾರ್ಯನಿರ್ವಹಿಸುವುದು

ಸತ್ಯವೇದದಲ್ಲಿ ದಾಖಲಾಗಿರುವಂತೆ ಪೌಲನ ಸೇವೆಯಿಂದ ನಾವು ಬಹಳಷ್ಟು ಕಲಿಯಬಹುದು. ಪೌಲನ ಸೇವೆಯ ಮುಲಕ, ದೇವ ರಾಜ್ಯವು ಹೇಗೆ ಬೆಳೆಯುತ್ತದೆ ಎಂಬುದಕ್ಕೆ ನಾವು ಒಂದು ಅಧ್ಯಯನವನ್ನು ನೋಡುತ್ತೇವೆ. ನಾವು ಪರಿಶೀಲಿಸಿದ ರಾಜ್ಯ ಬೆಳೆವಣಿಗೆಯ ಅನೇಕ ತತ್ವಗಳು ಪೌಲನ ಕೃತಿಯಲ್ಲಿ ಪ್ರಮುಖವಾಗಿವೆ.

**ಪೌಲನಂತೆ, ಅಪೊಸ್ತಲ ಸೇವೆಯನ್ನು ನಮ್ಮ ಪ್ರದೇಶಗಳಲ್ಲಿ ಯಾವುದೇ ಸ್ಥಳ ಉಳಿಸದೇ ಕಾರ್ಯನಿರ್ವಹಿಸುವುದು.**

ರೋಮಾ 15:17–24:



ದೇವರ ಸೇವೆಯಲ್ಲಿ ಹೊಗಳಿಕೊಳ್ಳುವುದಕ್ಕೆ ಕ್ರಿಸ್ತಯೇಸುವಿನಲ್ಲಿ ನನಗೆ ಕಾರಣವುಂಟು. ಕ್ರಿಸ್ತನು ಅನ್ಯಜನಗಳನ್ನು ತನಗೆ

ಅಧೀನಮಾಡಿಕೊಳ್ಳುವುದಕ್ಕಾಗಿ ನನ್ನ ಕೈಯಿಂದ ಮಾತಿನಲ್ಲಿಯೂ ಕ್ರಿಯೆಯಲ್ಲಿಯೂ ಸೂಚಕಕಾರ್ಯ ಅದ್ಭುತಕಾರ್ಯ ಗಳ ಬಲದಿಂದಲೂ ಪವಿತ್ರಾತ್ಮನ ಬಲದಿಂದಲೂ ಮಾಡಿಸಿದ ಕಾರ್ಯಗಳನ್ನೇ ಹೊರತು ಬೇರೆ ಯಾವ ಕಾರ್ಯಗಳನ್ನು ಹೇಳುವುದಕ್ಕೆ ನನಗೆ ಧೈರ್ಯ ಸಾಲದು. ನಾನು ಯೆರೂಸಲೇಮ್ ಮೊದಲುಗೊಂಡು ಇಲ್ಲುರಿಕ ಸೀಮೆಯ ಪರ್ಯಂತರಕ್ಕೂ ಸುತ್ತಿ ಕ್ರಿಸ್ತನ ಹೆಸರನ್ನು ತಿಳಿಸಿದ ಕಡೆಯಲ್ಲಿ ಸುವಾರ್ತೆಯನ್ನು ಪ್ರಕಟಿಸುವುದಿಲ್ಲವೆಂಬದಾಗಿ ನಿಷ್ಕರ್ಷೆ ಮಾಡಿಕೊಂಡೆನು. ಯಾರಿಗೆ ಆತನ ಸಮಾಚಾರ ಬಂದಿರಲಿಲ್ಲವೋ ಅವರೇ ಆತನನ್ನು ನೋಡುವರು; ಯಾರು ಆತನ ವರ್ತಮಾನವನ್ನು ಕೇಳಿರಲಿಲ್ಲವೋ ಅವರೇ ಗ್ರಹಿಸಿಕೊಳ್ಳುವರು. ಎಂಬದಾಗಿ ಬರೆದಿರುವ ಪ್ರಕಾರ ನನ್ನ ಕೆಲಸವನ್ನು ನಡೆಸಿದ್ದೇನೆ. ಈ ಕಾರಣದಿಂದ ನಿಮ್ಮ ಬಳಿಗೆ ಬರುವುದಕ್ಕೆ ನನಗೆ ಅನೇಕಾವರ್ತಿ ಅಭ್ಯಂತರವಾಯಿತು. ಆದರೆ ಇನ್ನು ಮೇಲೆ ಈ ಪ್ರಾಂತ್ಯಗಳಲ್ಲಿ ನನಗೆ ಅನುಕೂಲವಿಲ್ಲದಿದ್ದರಿಂದಲೂ ನಿಮ್ಮ ಬಳಿಗೆ ಬರುವುದಕ್ಕೆ ಅನೇಕ ವರ್ಷಗಳಿಂದ ಅಭಿಲಾಷೆಯಿರುವುದರಿಂದಲೂ ನಾನು ಸ್ಪೇನ್ ದೇಶಕ್ಕೆ ಹೋಗುವಾಗ ನನ್ನ ಮಾರ್ಗದಲ್ಲಿ ನಿಮ್ಮ ದರ್ಶನವನ್ನು ಮಾಡ ಬೇಕೆಂಬ ಅಭಿಪ್ರಾಯವುಂಟು. ತರುವಾಯ ನಿಮ್ಮ ಸಹವಾಸದಲ್ಲಿ ನನಗೆ ಸ್ವಲ್ಪಮಟ್ಟಿಗೆ ಸಂತೃಪ್ತಿಯಾದ ಮೇಲೆ

ನೀವು ಆ ದೇಶಕ್ಕೆ ನನ್ನ ಪ್ರಯಾಣವನ್ನು ಸಾಗಿಸುವಿರೆಂದು ನಂಬುತ್ತೇನೆ.

ಪೌಲನು ಯೆರುಸಲೇಮಿನಿಂದ ಮತ್ತು ಇಲ್ಲುರಿಕವರೆಗಿನ ಎಲ್ಲಾ ಮಾರ್ಗಗಳಲ್ಲೂ ಕ್ರಿಸ್ತನ ಸುವಾರ್ತೆಯ ಸೇವೆಯನ್ನು ಪೂರೈಸಿದನೆಂದು ಘೋಷಿಸುತ್ತಾನೆ. ಈ ಕಾರಣದಿಂದಾಗಿ, ಅವರು ಇನ್ನು ಮುಂದೆ ಆ ಪ್ರದೇಶಗಳಲ್ಲಿ ಕೆಲಸ ಮಾಡಲು ಯಾವುದೇ ಸ್ಥಳವನ್ನು ಹೊಂದಿರಲಿಲ್ಲ. ಯಾವುದೇ ಸ್ಥಳ ಉಳಿದಿಲ್ಲ. ಈ ಕೆಳಗಿನ ನಕ್ಷೆಯಲ್ಲಿ ಪೌಲನು ವಿವರಿಸಿದ ಪ್ರದೇಶಗಳನ್ನು ನಾವು ನೋಡಬಹುದು.



ಯರುಸಲೇಮಿನಿಂದ ಇಲ್ಲುರಿಕ ವರೆಗಿನ ಪ್ರದೇಶಗಳಲ್ಲಿ 2.5 ಕೋಟಿ ಜನರು ಸೇರಿದ್ದಾರೆ. ಅಪೋಸ್ತಲರ ಕೃತ್ಯಗಳು 13 ರಿಂದ 20 ನೇ ಅಧ್ಯಾಯಗಳಲ್ಲಿ ಪೌಲನ ಸೇವೆಯು ಈ ಪ್ರದೇಶಗಳಲ್ಲಿ 15 ವರ್ಷಗಳಿಗಿಂತ ಕಡಿಮೆ ಕಾಲ ನಡೆಯಿತು. ಇಷ್ಟು ಕಡಿಮೆ ಅವಧಿಯಲ್ಲಿ ಈ ಪ್ರದೇಶಗಳಿಲ್ಲಿ ಕೆಲಸ ಮಾಡಲು ಯಾವುದೇ ಸ್ಥಳವಿಲ್ಲ ಎಂದು ಪೌಲನು ಹೇಗೆ ಹೇಳಿರಬಹುದು?

ಅ.ಕೃ. 20:1–4:

> ಗದ್ದಲವು ನೀಂತ ತರುವಾಯ ಪೌಲನು ಶಿಷ್ಯರನ್ನೂ ಕೂಡ ಕರೆಸಿ ಧೈರ್ಯಗೊಳಿಸಿ ಅವರ ಅಪ್ಪಣೆ ತೆಗೆದುಕೊಂಡು ಮೆಕೆದೆ ದೋನ್ಯಕ್ಕೆ ಹೊರಟನು. ಆ ಸೀಮೆಯಲ್ಲಿ ಸಂಚಾರ ಮಾಡಿ ಅಲ್ಲಿಯವರನ್ನು ಅನೇಕ ಮಾತುಗಳಿಂದ ಧೈರ್ಯಪಡಿಸಿ ಗ್ರೀಸ್ ದೇಶಕ್ಕೆ ಬಂದನು. ಅಲ್ಲಿ ಮೂರು ತಿಂಗಳು ಕಳೆದ ಮೇಲೆ ಸಿರಿಯಾ ದೇಶಕ್ಕೆ ಸಮುದ್ರಮಾರ್ಗವಾಗಿ ಹೋಗಬೇಕೆಂದಿದ್ದಾಗ ಅವನಿಗೆ ವಿರುದ್ಧವಾಗಿ ಯೆಹೂದ್ಯರಲ್ಲಿ ಒಳಸಂಚು ಹುಟ್ಟಿದ್ದರಿಂದ ಅವನು ಮೆಕೆದೋನ್ಯದ ಮೇಲೆ ಹಿಂತಿರುಗಿ ಹೋಗುವು ದಕ್ಕೆ ತೀರ್ಮಾನ ಮಾಡಿದನು. ಪುರ್ರನ ಮಗನಾದ ಬೆರೋಯಾ ಪಟ್ಟಣದ ಸೋಪತ್ರನೂ ಥೆಸಲೋನಿಕದವರಲ್ಲಿ ಅರಿಸ್ತಾರ್ಕ ನೂ ಸೆಕುಂದನೂ ದರ್ಬೆಪಟ್ಟಣದ ಗಾಯನೂ

ತಿಮೊಥೆಯನೂ ಅಸ್ಯಸೀಮೆಯವರಲ್ಲಿ ತುಖಿಕನೂ ತೊಫ್ರಿಮನೂ ಅಸ್ಯಸೀಮೆ ಯವರೆಗೆ ಅವನ ಜೊತೆಯಲ್ಲಿ ಹೋದರು.

ಗ್ರೀಸ್‌ನಲ್ಲಿ ಈ ಮೂರು ತಿಂಗಳುಗಳಲ್ಲಿ ಬಹುಶ: ಪೌಲನು ಕೊರಿಂಥದಿಂದ ರೋಮನ್ನರಿಗೆ ಪತ್ರ ಬರೆಯುತ್ತಾನೆ (ಅ.ಕೃ. 20:2–3; ರೋಮಾ 15:19–32, 16:1–2, 23, ಮತ್ತು 1 ಕೊರಿಂಥ 1:14). ಪೌಲನು ಕೊರಿಂಥದಿಂದ ಬರೆಯುತ್ತಿದ್ದಂತೆ, ಯಾವುದೇ ಸ್ಥಳವಿಲ್ಲ ಎಂದು ಘೋಷಿಸುತ್ತಾನೆ ಮತ್ತು ಸ್ಪೇನ್‌ಗೆ ತೆರಳಲು ರೋಮ್‌ನಿಂದ ಸಹಾಯ ಕೇಳುತ್ತಾನೆ (ರೋಮ 15:23–24). ಕೆಳಕಂಡ ನಕ್ಷೆಯಲ್ಲಿ ಕೊರಿಂಥ, ರೋಮಾ, ಮತ್ತು ಸ್ಪೇನ್ ಇವುಗಳ ಪ್ರದೇಶಗಳನ್ನು ಗುರುತಿಸಲಾಗಿದೆ.



ಪೌಲನು ಗ್ರೀಸ್ ದೇಶವನ್ನು ತೊರೆದಾಗ ಅವರೊಂದಿಗೆ ಯಾರು ಇದ್ದರು? ಅ.ಕೃ. 20:4 ರಲ್ಲಿ ನೋಡುವ ಹಾಗೆ ಸೋಪತ್ರನೂ, ಅರಿಸ್ತಾರ್ಕನೂ, ಸೆಕುಂದನೂ, ಗಾಯನೂ, ತಿಮೊಥೆಯನೂ, ತುಖಿಕನೂ, ತ್ರೊಫಿಮನೂ ಇವರುಗಳು ಪೌಲ ನೊಂದಿಗಿದ್ದರು. ಹಾಗಾದರೆ, ಈ ಜನರು ಎಲ್ಲಿಂದ ಬಂದವರಾಗಿರುತ್ತಾರೆ?

ಸೋಪತ್ರನೂ ............**ಬೆರೋಯ**

ಅರಿಸ್ತಾರ್ಕನೂ ..........**ಥೆಸಲೋನಿಕ**

ಸೆಕುಂದನೂ..............**ಥೆಸಲೋನಿಕ**

ಗಾಯನೂ................**ದರ್ಬೆ**

ತಿಮೊಥೆಯನೂ ........**ಲುಸ್ತ್ರ** (ಅ.ಕೃ. 16:1)

ತುಖಿಕನೂ................**ಏಷ್ಯಾ**

ತ್ರೊಫಿಮನೂ ............**ಏಷ್ಯಾ**

ಈ ಸ್ಥಳಗಳು ಕೆಳಕಂಡ ನಕ್ಷೆಯಲ್ಲಿ ಸೂಚಿಸಿರುವುದಿಲ್ಲಾ.




ಪೌಲನು ತನ್ನ ಮೂರು ಪ್ರಯಾಣಗಳಲ್ಲಿ ಎಲ್ಲಿ ಕೆಲಸ ಮಾಡಿದ್ದನು? ಪೌಲನು ಪ್ರಮುಖ ಪ್ರದೇಶಗಳಲ್ಲಿ ಕೆಲಸ ಮಾಡಿದ್ದನು. ಆ ಪ್ರದೇಶಗಳಾವುವೆಂದರೆ:

| | |
|---|---|
| **ಗಲಾತ್ಯ** | ಅ.ಕೃ. 13–14 |
| | ಅ.ಕೃ. 16:1–5 |
| | ಅ.ಕೃ. 18:23 |
| **ಅಸ್ಯ** | ಅ.ಕೃ. 19 |
| **ಮೆಕೆದೋನ್ಯ** | ಅ.ಕೃ. 16:6–17:5 |
| | ಅ.ಕೃ. 20:1–6 |
| **ಆಖಾಯ** / ಗ್ರೀಸ್ | ಅ.ಕೃ. 20:1–5 |

ಈ ಪ್ರದೇಶಗಳು ಕೆಳ ಕಾಣುವ ನಕ್ಷೆಯಲ್ಲಿ ತೋರಿ ಬರುತ್ತದೆ.




ಈ ಪ್ರದೇಶಗಳಲ್ಲಿ ತನ್ನ ಕೆಲಸವು ಪೂರ್ಣಗೊಂಡಿದೆ ಎಂದು ಪೌಲನು ಯಾವ ಪುರಾವೆಗಳಿಂದ ಘೋಷಿಸಿದನು? ಪೌಲನೊಂದಿಗೆ ಇದ್ದ ಪುರುಷರು, ಗಲಾತ್ಯ, ಅಸ್ಯ ಮತ್ತು ಮ್ಯಾಸಿಡೋನ್ಯಾದವರು. ಪೌಲನು ಗ್ರೀಸ್‌ದೇಶದಿಂದ ಬರೆಯುತ್ತಿದ್ದಾನೆ. ಆದ್ದರಿಂದ ನಾಯಕರು ಮತ್ತು ಸಭೆಗಳು ಯೆರುಸಲೇಮಿನಿಂದ ಇಲ್ಲುರಿಕವರೆಗಿನ ಕೆಲಸವನ್ನು ಮುಂದುವರಿಸುವ ಸಾಮರ್ಥ್ಯವನ್ನು ಹೊಂದಿವೆ ಎಂದು ಪೌಲನಿಗೆ ತಿಳಿದಿತ್ತು. ಪೌಲನು ತಾನು ಹೋದ ಪ್ರದೇಶಗಳಲ್ಲಿ

ಮುನ್ನಡೆಸಲು ಹಿರಿಯರನ್ನು / ಮೇಲ್ವಿಚಾರಕರನ್ನು ಗುರುತಿಸಲು, ಸೂಚಿಸಲು ಮತ್ತು ನಿಯೋಜಿಸಲು ಶ್ರಮಿಸಿದನು. ಈ ಪ್ರದೇಶಗಳಲ್ಲಿ ಕೆಲಸ ಮಾಡಲು ಪೌಲನು ನಂಬಿಗಸ್ತರನ್ನು ನೇಮಿಸಿದ್ದನು.

ಈಗ, ಸಭೆಗಳಲ್ಲಿ ಪ್ರಮುಖ ಸಮಸ್ಯೆ ಉದ್ಭವಿಸಿದೆಯೇ? ಹೌದು. ಲೈಂಗಿಕ ಅನೈತಿಕತೆ (1 ಕೊರಿಂಥ 5:1), ಮತ್ತು ಸುಳ್ಳು ಸುವಾರ್ತೆಯನ್ನು ನಂಬುವುದು (ಗಲಾತ್ಯ 1:6) ಈ ಎರಡು ಸಮಸ್ಯೆಗಳಿದ್ದವು. ಸಮಸ್ಯೆಗಳು ಬರುವುದಾಗಿ ಪೌಲನಿಗೆ ತಿಳಿದಿತ್ತು (ಅ.ಕೃ. 20:28–32), ಆದಾಗ್ಯೂ ಪೌಲನು ದೇವರಲ್ಲಿ ಆತ್ಮವಿಶ್ವಾಸವುಳ್ಳವನಾಗಿದ್ದನು.

ಈ ಪ್ರದೇಶಗಳಲ್ಲಿನ ಸಭೆಗಳಲ್ಲಿ ದೇವರ ಶಕ್ತಿಯನ್ನು ಪ್ರದರ್ಶಿಸಲಾಗಿದ್ದರಿಂದ ಯೆರೂಸಲೇಮಿನಿಂದ ಇಲ್ಲುರಿಕವರೆಗೆ ತನ್ನ ಕೆಲಸಕ್ಕೆ ಯಾವುದೇ ಸ್ಥಳವಿಲ್ಲ ಎಂದು ಪೌಲನು ಪರಿಗಣಿಸಿದ್ದನು. ಈ ಪ್ರದೇಶಗಳಲ್ಲಿನ ಸಭೆಗಳ ಅನ್ಯಜನರು ವಾಕ್ಯ ಮತ್ತು ಕಾರ್ಯಗಳಲ್ಲಿ ವಿಧೇಯರಾಗಿದ್ದರು (ರೋಮ 15:18, 1:5).

ದೇವರು ಇಂದು ಅದೇ ಕೆಲಸವನ್ನು ಸಾಧಿಸಬಹುದೇ? ಹೌದು! ನಮ್ಮ ದೇವರು ಪೌಲನ ಕಾಲದಲ್ಲಿದ್ದಂತೆಯೇ

ಈಗಲೂ ಇರುವನೋ? ಹೌದು! ಬೆಂಗಳೂರಿನಲ್ಲಿ ಮತ್ತು ಸುವಾರ್ತೆಗಾಗಿ ಗುರಿಮಾಡಿಡಲ್ಪಟ್ಟ ಬಿಡಲ್ಪಟ್ಟ ಜಾಗಗಳನ್ನು ನೋಡಬಹುದೇ? ಹೌದು!



ಯಾವುದೇ ಸ್ಥಳವನ್ನು ಉಳಿಸಿಕೊಳ್ಳಲು ಪೌಲನು ತನ್ನ ಮೂರು ಪ್ರಯಾಣಗಳಲ್ಲಿ ಏನು ಮಾಡಿದನು? ಅಪೋಸ್ತಲರ ಕೃತ್ಯಗಳು ಪೂರ್ಣ ಪುಸ್ತಕದಲ್ಲಿ ಪೌಲನು ಐದು ಕಾರ್ಯಗಳನ್ನು ಪದೇ - ಪದೇ ಮಾಡಿರುತ್ತಾನೆ. ಅದರ ಪೂರ್ಣ ಮಾಹಿತಿಯನ್ನು ನಾವು ಬಹಳ ಸ್ಪಷ್ಟವಾಗಿ ನೋಡಬಹುದು:

## ಅ.ಕೃ. 14:19–23:

19 ತರುವಾಯ ಅಂತಿಯೋಕ್ಯದಿಂದಲೂ ಇಕೋನ್ಯದಿಂದಲೂ
ಯೆಹೂದ್ಯರು ಬಂದು ಜನರನ್ನು ಪ್ರೇರೇಪಿಸಿ ಪೌಲನನ್ನು
ಕೊಲ್ಲುವುದಕ್ಕೆ ಕಲ್ಲೆಸೆದು ಅವನು ಸತ್ತನೆಂದು ಭಾವಿಸಿ
ಊರಹೊರಕ್ಕೆ ಎಳೆದುಬಿಟ್ಟರು. 20 ಆದರೆ ಶಿಷ್ಯರು ಸುತ್ತಲೂ
ನಿಂತುಕೊಂಡಿರುವಾಗ ಅವನು ಎದ್ದು ಊರೊಳಕ್ಕೆ
ಹೋದನು. ಮರುದಿನ ಬಾರ್ನಬನ ಜೊತೆಯಲ್ಲಿ ದರ್ಬೆಗೆ
ಹೊರಟನು. 21 ಆ ಊರಿನಲ್ಲಿ ಅವರು ಸುವಾರ್ತೆಯನ್ನು
ಸಾರಿ ಅನೇಕರನ್ನು ಶಿಷ್ಯರನ್ನಾಗಿ ಮಾಡಿದ ಮೇಲೆ ಹಿಂತಿರುಗಿ
ಲುಸ್ತ್ರಕ್ಕೂ ಇಕೋನ್ಯಕ್ಕೂ ಅಂತಿಯೋಕ್ಯಕ್ಕೂ ಬಂದು ಶಿಷ್ಯರ
ಮನಸ್ಸುಗಳನ್ನು ಧೃಢಪಡಿಸಿದರು. 22 ನಾವು ಬಹು ಸಂ
ಕಟಗಳನ್ನು ತಾಳಿಕೊಂಡು ದೇಚರ ರಾಜ್ಯದೊಳಗೆ
ಸೇರಬೇಕೆಂದು ಎಚ್ಚರಿಕೆಯ ಮಾತನ್ನು ಹೇಳಿ
ಕ್ರಿಸ್ತನಂಬಿಕೆಯಲ್ಲಿ ಸ್ಥಿರವಾಗಿರ್ರೆಂದು ಅವರನ್ನು
ಧೈರ್ಯಗೊಳಿಸಿದರು. 23 ಇದಲ್ಲದೇ ಪ್ರತಿಸಭೆಯಲ್ಲಿ
ಸಭೆಯವರ ಸಮ್ಮತಿಯಿಂದ ಹಿರಿಯರನ್ನು ಗೊತ್ತುಮಾಡಿ
ನೇಮಿಸಿ ಉಪವಾಸವಿದ್ದು ಪ್ರಾರ್ಥನೆಮಾಡಿ ಅವರು ನಂಬಿದ್ದ
ಕರ್ತನ ಕೈಗೆ ಅವರನ್ನು ಒಪ್ಪಿಸಿದರು.

ಪೌಲನು ಈ ವಾಕ್ಯಭಾಗದಲ್ಲಿ ಏನು ಮಾಡುತ್ತಿದ್ದಾನೆ?
ಪೌಲನು:

1 **ನೂತನ ಪ್ರದೇಶಗಳನ್ನು ಪ್ರವೇಶಿಸುತ್ತಾನೆ** (ವ. 20)

2 **ಸುವಾರ್ತೆಯನ್ನು ಸಾರುತ್ತಾನೆ** (ವ. 21)

3 **ಶಿಷ್ಯರು ಮತ್ತು ಯೇಸುವಿನ ಅನುಯಾಯಿಗಳು** (ವ. 22)

4 **ಸಭೆಗಳನ್ನು ರಚಿಸುತ್ತಾನೆ** (ವ. 23)

5 **ನಾಯಕರುಗಳನ್ನು ಗುಣಿಸುತ್ತಾನೆ** (ವ. 23)

ಇವು ಯೇಸುವಿನ ಬೋಧನೆಯಲ್ಲಿ ಕಂಡುಬರುವ ರಾಜ್ಯ ಬೆಳವಣಿಗೆಯ ಒಂದೇ ಭಾಗಗಳಾಗಿವೆ. ದೇವರ ರಾಜ್ಯವು ಹೇಗೆ ಬೆಳೆಯುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಲು, ನಾವು ಈ ರೇಖಾಚಿತ್ರವನ್ನು ಬಳಸಬಹುದು:




1. ದೇವರಲ್ಲಿ ನೆಲೆಗೊಳ್ಳುವಿಕೆ
2. ಖಾಲಿ ಹೊಲದೆಡೆಗೆ ಪ್ರವೇಶ
3. ಸುವಾರ್ತೆ ಸಾರೋಣ
4. ಶಿಷ್ಯತ್ವ
5. ಸಭೆಗಳ ಸ್ಥಾಪನೆ
6. ಗುಣಿಸಲ್ಪಡುವ ನಾಯಕರುಗಳು

ರೇಖಾಚಿತ್ರದಂತೆ, ದೇವರ ರಾಜ್ಯದ ಬೆಳವಣಿಗೆಯು ಹಲವಾರು ಭಾಗಗಳನ್ನು ಒಳಗೊಂಡಿದೆ. ಈ ಭಾಗಗಳು ದೇವರಲ್ಲಿ ನೆಲೆಸಿದೆ, ನಂಬಿಕೆಯಿಲ್ಲದವರ ಖಾಲಿ ಕ್ಷೇತ್ರಗಳಿಗೆ ಪ್ರವೇಶಿಸಿ, ಸುವಾರ್ತೆಯನ್ನು ಸಾರುತ್ತಿವೆ, ಶಿಷ್ಯತ್ವ, ಸಭೆಗಳನ್ನು ರೂಪಿಸುತ್ತವೆ ಮತ್ತು ನಾಯಕರನ್ನು ಗುಣಿಸುತ್ತವೆ. ಇದು ಒಂದು ಚಕ್ರ, ಮತ್ತು ಪರಿಣಾಮಕಾರಿ ದೇವರ ರಾಜ್ಯದ ಬೆಳವಣಿಗೆಗೆ ಪ್ರತಿಯೊಂದು ಭಾಗವೂ ಅಗತ್ಯವಾಗಿರುತ್ತದೆ. ದೇವರ ರಾಜ್ಯವು ಬೆಳೆಯುವುದನ್ನು ನೋಡುವಲ್ಲಿ ಪರಿಣಾಮಕಾರಿಯಾಗಲು ನಮಗೆ ಸಹಾಯ ಮಾಡಲು ನಾವು ಈ ಪ್ರತಿಯೊಂದು ಭಾಗಕ್ಕೂ ಸತ್ಯವೇದದ ಪ್ರಕಾರ, ಸರಳವಾದ, ಪುನರುತ್ಪಾದನೆಯನ್ನು ಬಳಸಬಹುದು. ಯೇಸುವಿನ ಬೋಧನೆ ಮತ್ತು ಪೌಲನ ಸೇವೆಯಿಂದ ಅದೇ ಮಾದರಿಯನ್ನು ಅನುಸರಿಸಿ, ನಮ್ಮ ಪ್ರದೇಶಗಳಲ್ಲಿ ಯಾವುದೇ ಸ್ಥಳವನ್ನು ನಾವು ಕಾಣುವುದಿಲ್ಲ.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.